For more job news visit : www.kpscvaani.com

ಮನಿಶ್ ಮ್ಯಾನ್ ಪವರ್ ಏಜನ್ಸಿ, ಕಲಬುರ್ಗಿ.

ಪ್ರಕಟಣೆ

ರಾಯಚೂರು ಜಿಲ್ಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಅನುಷ್ಠಾನಗೊಳಿಸಲು ತಾಂತ್ರಿಕ ಸಿಬ್ಬಂದಿಗಳ ಸೇವೆ ಅವಶ್ಯಕತೆ ಇದ್ದು, ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಹುದ್ದೆಗಳ ಸಂಖ್ಯೆ, ಕನಿಷ್ಠ ವಿದ್ಯಾರ್ಹತೆ, ವಯೋಮಿತಿ, ಮಾಸಿಕ ಸಂಭಾವನೆಯನ್ನು ಈ ಕೆಳಗೆ ವಿವರಿಸಲಾಗಿದೆ. ಆಸಕ್ತರು ಅರ್ಜಿಗಳನ್ನು ಕೇವಲ Online ಮುಖಾಂತರ ಮಾತ್ರ ಸಲ್ಲಿಸಬಹುದು. Online ಅರ್ಜಿ ಸಲ್ಲಿಸಲು https://zpraichur.karnataka.gov.in ಇಲ್ಲಿಗೆ ಭೇಟಿ ನೀಡುವುದು.

ಕ್ರ. ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ
1	ತಾಂತ್ರಿಕ ಸಂಯೋಜಕರು (TC)	2	B.E/B.Tech-civil
2	ತಾಲೂಕು ಎಂ.ಐ.ಎಸ್ ಸಂಯೋಜಕರು(TMIS)	2	BE/BTech (computer science/electricals/ electronics/information science) /BCA/BSc in computer science/Diploma in computer science
3	ಆಡಳಿತ ಸಹಾಯಕರು	3	Graduation in commerce or other equivalent qualification with computer knowledge. ಕನ್ನಡ ಹಾಗೂ ಆಂಗ್ಲ ಭಾಷೆ ಟೈಪಿಂಗ್ ಹೊಂದಿರಬೇಕು (ಪ್ರಾಯೋಗಿಕ ಪರೀಕ್ಷೆ ನಡೆಸಲಾಗುವುದು).
4	ಗಣಕಯಂತ್ರ ನಿರ್ವಾಹಕರು (ಅನುಷ್ಠಾನ ಇಲಾಖೆ)	2	Graduation or other equivalent qualification with computer knowledge. ಕನ್ನಡ ಹಾಗೂ ಆಂಗ್ಲ ಭಾಷೆ ಟೈಪಿಂಗ್ ಹೊಂದಿರಬೇಕು. (ಪ್ರಾಯೋಗಿಕ ಪರೀಕ್ಷೆ ನಡೆಸಲಾಗುವುದು).

ಎಲ್ಲಾ ಹುದ್ದೆಗಳ ವಯೋಮಿತಿ: 40 ವರ್ಷಗಳು.

- ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 10.12.2025
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24.12.2025
- ಅಭರ್ಥಿಗಳ ವಯೋಮಾನವನ್ನು ದಿನಾಂಕ: 24.12.2025ರ ಅಂತ್ಯಕ್ಕೆ ಪರಿಗಣಿಸಲಾಗುವುದು.

ಸೂಚನೆಗಳು :-

- ಆಯ್ಕೆಯಾದ ಅಭ್ಯರ್ಥಿಗಳನ್ನು ಕೇವಲ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ನೌಕರರಾಗಿದ್ದು, ಯಾವುದೇ ಕಾರಣಕ್ಕೂ ಖಾಯಂ ಹುದ್ದೆಯಾಗಿರುವುದಿಲ್ಲ.
- ರಾಯಚೂರು ಜಿಲ್ಲಾ ಪಂಚಾಯತ ಕಾರ್ಯಾಲಯ ಹಾಗೂ ಅಧೀನ ಕಚೇರಿಗಳಲ್ಲಿ ಕಳೆದ 5 ವರ್ಷಗಳಲ್ಲಿ ಸೇವೆಯಿಂದ ತೆಗೆದುಹಾಕಿದ/ವಜಾಗೊಳಿಸಿದ/ರಾಜೀನಾಮೆ ನೀಡಿದ/ಸೇವೆ ಹಿಂತಿರುಗಿಸಿದ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸುವುದಿಲ್ಲ.
- ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ನಮೂದಿಸಿರುವ ದಾಖಲೆಗಳಾದ ವಿದ್ಯಾರ್ಹತೆ/ಸೇವಾನುಭವಕ್ಕೆ ಸಂಬಂಧಪಟ್ಟ ಎಲ್ಲಾ ಮೂಲ ಪ್ರಮಾಣ ಪತ್ರ/ದಾಖಲೆಗಳನ್ನು ಕಡ್ಡಾಯವಾಗಿ upload ಮಾಡುವುದು. Online ನಲ್ಲಿ upload ಮಾಡದೇ ಇರುವ ಯಾವ ದಾಖಲಾತಿಗಳನ್ನು ಪರಿಶೀಲನಾ ಸಮಯದಲ್ಲಿ ಪರಿಗಣಿಸುವುದಿಲ್ಲ.
- ದಾಖಲಾತಿ ಪರಿಶೀಲನೆಯಲ್ಲಿ ಅರ್ಹರಾದ ಅಭ್ಯರ್ಥಿಗಳನ್ನು ವಿದ್ಯಾರ್ಹತೆ ಹೊಂದಿದ ಅಂಕಗಳು ಹಾಗೂ ಪಡೆದ ಸೇವಾ ಅನುಭವದ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಚುರಪಡಿಸಲಾಗುವುದು.
- ಸೇವಾ ಅನುಭವದ ದೃಢೀಕರಣದ ಜೊತೆಗೆ ಸೇವೆಯ ಸಂದರ್ಭದಲ್ಲಿ ಪಡೆಯಲಾದ ವೇತನದ ಬ್ಯಾಂಕ್ ಪಾಸ್ ಶೀಟ್ ಪ್ರತಿಯನ್ನು ಲಗತ್ತಿಸುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಸದರಿ ಅಭ್ಯರ್ಥಿಗಳ ಸೇವಾನುಭವದ ದಾಖಲಾತಿಯನ್ನು ಪರಿಗಣಿಸುವುದಿಲ್ಲ.
- ಹುದ್ದೆಗಳನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡಬಹುದಾಗಿರುತ್ತದೆ.

ಮಾಸಿಕ ಸಂಭಾವನೆ:-

For more job news visit : www.kpscvaani.com

- ತಾಂತ್ರಿಕ ಸಂಯೋಜಕರು ಹುದ್ದೆಗೆ ಮಾಸಿಕ ಸಂಭಾವನೆ ರೂ.35,000/- ಹಾಗೂ ಪ್ರಯಾಣ ಭತ್ಯೆ ರೂ.2,000/-ಗಳು.
- ತಾಲೂಕು ಎಂ.ಐ.ಎಸ್ ಸಂಯೋಜಕರ ಹುದ್ದೆಗೆ ಮಾಸಿಕ ಸಂಭಾವನೆ ರೂ.28,000.
- ಆಡಳಿತ ಸಹಾಯಕರು ಹುದ್ದೆಗೆ ಮಾಸಿಕ ಸಂಭಾವನೆ ರೂ.22,000/-ಗಳು
- ಗಣಕಯಂತ್ರ ನಿರ್ವಾಹಕರು ಹುದ್ದೆಗೆ ಸಂಭಾವನೆ ರೂ.18,480/-ಗಳು.

ಆಯ್ಕೆಯ ವಿಧಾನ:-

ಈ ಕೆಳಕಂಡ ವಿಧಾನವನ್ನು ಅಳವಡಿಸಿ ಮೆರಿಟ್ ಪಟ್ಟಿ ಸಿದ್ಧಪಡಿಸಿ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.

ಹುದ್ದೆ:- ತಾಂತ್ರಿಕ ಸಂಯೋಜಕರು(TC)

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ಅನುಭವಕ್ಕೆ- ಗರಿಷ್ಠ 10 ಅಂಕಗಳು

ಹುದ್ದೆ:- ತಾಂತ್ರಿಕ ಎಂ.ಐ.ಎಸ್ ಸಂಯೋಜಕರು(TMIS)

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ಅನುಭವಕ್ಕೆ- ಗರಿಷ್ಠ 10 ಅಂಕಗಳು

ಹುದ್ದೆ:- ಆಡಳಿತ ಸಹಾಯಕರು

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ಅನುಭವಕ್ಕೆ- 10 ಅಂಕಗಳು ಗರಿಷ್ಠ

ಹುದ್ದೆ:- ಗಣಕಯಂತ್ರ ನಿರ್ವಾಹಕರು (ಅನುಷ್ಠಾನ ಇಲಾಖೆ)

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ಅನುಭವಕ್ಕೆ- 10 ಅಂಕಗಳು ಗರಿಷ್ಠ

ಮುಖ್ಯಸ್ಥರು,

Manish Man Power Agency.